# ಗುಳಿ ಕೆನ್ನೆ ನಟಿಗೊಂದು ಬಚ್ಚಲುಮನೆ

ಅಂಥ ಬಣ್ಣವೇನೂ ಇಲ್ಲ. ಎತ್ತರದ ನಿಲುವು. ಕಣ್ಣು, ನಗುವಿನಲ್ಲಿ ಹಿಡಿದಿಡುವ ಆಕರ್ಷಣೆ. ನಗುವಿನ ತೀವ್ರತೆ ಹೆಚ್ಚುಮಾಡುವಂಥ ಗುಳಿ ಕೆನ್ನೆ. ಮೂಗಿನ ಮೇಲೆ ನಿರಿಗೆ ಮೂಡಿಸಿಯೇ ಅವರು ನಗುವುದು, ಅಳುವುದು. ಅವರ ಪತಿ ಸೂಕ್ಷ್ಮ ಸಂವೇದನೆಯ ನಿರ್ದೇಶಕ. ವಿಷ್ಣುವರ್ಧನ್ ಎಂದರೆ ಮೆಚ್ಚು, ಅನಂತನಾಗ್ ಎಂದರೆ ಗೌರವ ಎನ್ನುವ ನಟಿ ಈಗ ಸಂಸಾರದ ಉಸಾಬರಿಯ ನಡುವೆಯೇ ನಿರ್ದೇಶಕರ ಮುಖ ನೋಡಿಕೊಂಡು ನಟಿಸುವುದು ಇದೆ. ಅದರಲ್ಲೂ ಅನಂತನಾಗ್ ಅವರಿಗೆ ಜೋಡಿಯಾಗುವುದು ಎಂದರೆ ತುಂಬಾ ಇಷ್ಟ.

ನೋಡಲು ನಟಿ ಸೌಮ್ಯ. ಕಣ್ನೋಟ, ನಗುವಿಗೆ ಮರುಳಾಗದವರಿಲ್ಲ. ಹಾಗಂತ ಅವರು ವ್ಯಾವಹಾರಿಕವಾಗಿ ಯಾವ ಬಂಧನಕ್ಕೂ ಒಳಪಡುವವರಲ್ಲ. ಮುತ್ತಿನಹಾರದಲ್ಲಿ ಒಂದು ಮುತ್ತು ಅತ್ತಿತ್ತಲಾದರೂ ಅವರಿಗೆ ಕೆಂಡದಂಥ ಕೋಪ ಬರುತ್ತದೆ. ಎಷ್ಟೇ ಆಗಲಿ ಅವರು ಒಂಥರಾ ಬೆಂಕಿಯಲ್ಲಿ ಅರಳಿದ ಹೂವಿನಂತೆ.

ಇಂತಿಪ್ಪ ನಟಿ ಇತ್ತಿತ್ತಲಾಗಿ ಮಾತಿಗೆ ಹೆಚ್ಚು ಹೊತ್ತು ಕೂರುವುದಿಲ್ಲ. ಕುದುರೆ ಮೇಲೆಯೇ ಬಂದಂಥ ಭಾವದಲ್ಲಿ ಇರುತ್ತಾರೆ. ಸಿನಿಮಾದಲ್ಲಿ ತಮ್ಮ ಪಾತ್ರ ಎಷ್ಟೋ ಅಷ್ಟು ಮಾತ್ರ ಮಾತನಾಡಿ ಹೋಗುವುದನ್ನು ಪ್ರಜ್ಞಾಪೂರ್ವಕವಾಗಿ ರೂಢಿಸಿಕೊಂಡಿದ್ದಾರೆ. ಸಂಖ್ಯಾದೃಷ್ಟಿಯಲ್ಲಿ ಈಗ ಸಿನಿಮಾಗಳು ಕಡಿಮೆಯೇ ಆದರೂ ಹಳೆಯ ಗತ್ತು ಮಾತ್ರ ಮುಕ್ಕಾಗಿಲ್ಲ.

ಕನ್ನಡದಲ್ಲಿ ಈ ನಟಿಗೆ ಘನತೆ ತಂದುಕೊಂಡ ನಿರ್ದೇಶಕರು ಒಬ್ಬರಿದ್ದಾರೆ. ಅವರು ಈ ನಟಿಗೆ ತದ್ವಿರುದ್ಧವಾದ ಧೋರಣೆ ಉಳ್ಳವರು. ನಟೀಮಣಿ ನಾಸ್ಟಾಲ್ಜಿಕ್ ಆಗಿ ಮಾತನಾಡಲು ಹಿಂದೇಟು ಹಾಕಿದರೆ, ಅವರು ಸದಾ ಗತವೈಭವದಲ್ಲೇ ಮುಳುಗಿದವರು. ಅವರು ಒಂದೊಮ್ಮೆ ಈ ನಟೀಮಣಿ ಹೇಗೆಲ್ಲಾ ಭವ ಬಂಧನದೊಳು ಸಿಲುಕಿಸಿದ್ದರು ಎನ್ನುವುದನ್ನು ಸಾಬೀತುಪಡಿಸಲು ಒಂದು ಘಟನೆಯನ್ನು ನೆನಪಿಸಿಕೊಂಡರು.

ಹಾಡೊಂದರ ಚಿತ್ರೀಕರಣ. ಕಡಲತಟವೇ ಲೊಕೇಷನ್. ಇಳಿದುಕೊಂಡಿದ್ದ ಹೋಟೆಲ್ ಆ ಸ್ಥಳದಿಂದ ನಡೆದು ಹೋಗಬಹುದಾದಷ್ಟು ದೂರದಲ್ಲಿ ಇತ್ತು. ಒಂದರ ಮೇಲೆ ಒಂದರಂತೆ ನಟಿಯ ಮೇಲೆ ಬಣ್ಣ ಸುರಿಯುವ ಹಾಡಿನ ಸನ್ನಿವೇಶ ಅದು. ಗೀತೆಯ 'ಏಸ್ತೆಟಿಕ್ಸ್'ಗೆ ಅದು ಮುಖ್ಯವಾಗಿತ್ತು. ಕನ್ನಡಿಯಲ್ಲಿ ಮುಖ ನೋಡಿಕೊಂಡು ಟಚಪ್ ಮಾಡಿಸಿಕೊಂಡ ನಂತರ ನಟೀಮಣಿ ಒಂದು ಅಹವಾಲನ್ನು ನಿರ್ದೇಶಕರ ಮುಂದಿಟ್ಟರು. ಬಣ್ಣ ಹಾಕುವ ಸ್ಥಳದಲ್ಲೇ ಒಂದು ಬಚ್ಚಲುಮನೆ ಕಟ್ಟಿಸಬೇಕೆಂಬುದೇ ಅವರ ಬೇಡಿಕೆ. ತಲೆ, ಮುಖದ ಮೇಲೆ ಸುರಿದ ಬಣ್ಣವನ್ನು ತಕ್ಷಣ ತೊಳೆದುಕೊಳ್ಳದೇ ಇದ್ದರೆ ಏನಾದರೂ ಅಲರ್ಜಿಯಾಗಬಹುದು ಎನ್ನುವುದು ನಟಿಯ ಆತಂಕ. ಹೋಟೆಲ್ ರೂಮ್ ತುಸು ದೂರದಲ್ಲಿ ಇದ್ದುದ್ದರಿಂದ ಅಲ್ಲಿಗೆ ಹೋಗಿ ಫ್ರೆಷ್ ಆಗಿ ಬರುವುದು ಪ್ರಾಕ್ಟಿಕಲ್ ಅಲ್ಲ ಎಂದು ನಟಿ ಖಂಡತುಂಡವಾಗಿ ಹೇಳಿಬಿಟ್ಟರು. ಹಾಡಿನ ಚಿತ್ರೀಕರಣ ಸುಸೂತ್ರವಾಗಿ ಸಾಗಬೇಕಲ್ಲ; ವಿಧಿ ಇಲ್ಲದೆ ನಿರ್ದೇಶಕರು ಬಚ್ಚಲುಮನೆ ಕಟ್ಟಿಸಿದರು. ಅದಕ್ಕೊಂದು ಭದ್ರವಾದ ಕದವಿಕ್ಕಿಸಿದರು. 'ಆ ಕಾಲದಲ್ಲಿ ಮೊಬೈಲ್ ಬಚ್ಚಲುಮನೆ ಇದ್ದಿದ್ದರೆ ಎಷ್ಟು ಚೆನ್ನಾಗಿತ್ತು' ಎಂದು ಈಗ ನೆನಪಿಸಿಕೊಂಡು ಆ ನಿರ್ದೇಶಕರು ಗೊಳ್ಳನೆ ನಗುತ್ತಾರೆ. ಆದರೆ ನಮ್ಮಂಥ ಹದಿನಾರಾಣೆ ಪ್ರೇಕ್ಷಕರಿಗೆ ನಟಿಯ ಗುಳಿ ಕೆನ್ನೆಯ ಸುಂದರ ನಗು ನೆನಪಾಗುತ್ತದೆಯೇ ವಿನಾ ಇಂಥ ಸಣ್ಣಪುಟ್ಟದಾದರೂ ಗಹನ ಎನ್ನಬಹುದಾದ ಕಿರಿಕಿರಿಗಳು ಗೊತ್ತೇ ಆಗುವುದಿಲ್ಲ.

● ಎನ್ವಿ

Printed and Published by S.V. Srinivasan on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68